**ದಿನಾಂಕ 08-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ವಾದಿಯ ಪರ: ಶ್ರೀ ಎಸ್. ಎಮ್. ವಕೀಲರಿಂದಃ</u>**

**1.** ದಾವಾ ಆಸ್ತಿಯು ವಾದಿಯ ಮನೆ ಇರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ನಮಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 150 x 96 ಫೀಟ ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿಯು 48 x 30 ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಜಮೀನ ಸರ್ವೆ ನಂಬರ 90 ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಜಮೀನ ಸರ್ವೆ ನಂಬರ 90 ರಲ್ಲಿ ದಾವಾ ಆಸ್ತಿ ಬರುತ್ತದೆ ಎಂದು ತೋರಿಸಲು ನಾನು ಪಹಣಿಯನ್ನು ಸಲ್ಲಿಸಿರುತ್ತೇನೆ. ಜಮೀನ ಸರ್ವೆ ನಂಬರ 90 ರಲ್ಲಿ ದಾವಾ ಆಸ್ತಿಯು ಬರುವುದಿಲ್ಲ ಎಂದರೆ ಸಾಕ್ಷಿಯು ಸ್ಲಮ್ ಬೋರ್ಡದವರು ನಮಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸ್ಲಮ್ ಬೋರ್ಡದವರು ನೀಡಿರುತ್ತಾರೆ ಎಂದು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಕಿರುತ್ತೇನೆ. ಸದರಿ ದಾವಾ ಆಸ್ತಿಯು ಸ್ಲಮ ಬೋರ್ಡದವರು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2.** ದಾವಾ ಆಸ್ತಿಯು ನಮಗೆ ಮತ್ತು ಸ್ಲಮ್ ಬೋರ್ಡಗೆ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಿಂಗಪ್ಪ ತಂದೆ ರಾಮಣ್ಣಾ ಚಿಗನೂರು ಇವರು ಮಾಲೀಕರು ಇದ್ದರು ಎಂದರೆ ಸರಿಯಲ್ಲ. ಸದರಿ ನಿಂಗಪ್ಪ ತಂದೆ ರಾಮಣ್ಣಾ ಇವರ ಮನೆ ನಂಬರ 4-1-3 ಇತ್ತು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ನಿಂಗಪ್ಪ ಇವರ ಆಸ್ತಿಯ 3 ಕೋಣೆ ಒಂದು ಹಾಲ್ ಮತ್ತು 150 x 96 ಫೀಟ ಖುಲ್ಲಾ ಜಾಗ ಇತ್ತು ಎಂದರೆ ಸರಿಯಲ್ಲ. ಸದರಿ ಮುನ್ಸಿಪಲ್ ನಂಬರ 4-1-3 ಇದು ನಿಂಗಪ್ಪ ಇವರ ಹೆಸರಿನಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಂಗಪ್ಪ ಮರಣ ಹೊಂದಿದ ನಂತರ ಸಾಬಣ್ಣಾ ಮತ್ತು ಮಲ್ಲಪ್ಪ

ಇವರ ಹೆಸರಿಗೆ ಮನೆ ನಂಬರ 4-1-3 ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನ್ಸಿಪಾಲಿಟಿಯಲ್ಲಿ 3 ಕೋಣೆ ಒಂದು ಹಾಲ್, ಖುಲ್ಲಾ ಜಾಗ ಇದೆ ಎಂದು ಬರೆದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ನಿಂಗಪ್ಪ ಇವನ ಮಗ ಸಿದ್ರಾಮಪ್ಪ ಇವರು ಮರಣ ಹೊಂದಿದ್ದರಿಂದ ಮನೆಯ ಆಸ್ತಿ ಸಾಬಣ್ಣ ಮತ್ತು ಮಲ್ಲಪ್ಪ ಇವರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಮುಂಚೆಯಿಂದ ನಿಂಗಪ್ಪ ಇವರ ಮರಣದ ನಂತರ ವಾದಿ ಮತ್ತು ಮಲ್ಲಪ್ಪ ಇವರ ಹೆಸರಿನಲ್ಲಿ ಮನೆ ಆಸ್ತಿ ನಂಬರ 4-1-3 ಇಲ್ಲಿಯವರೆಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ.

3. ಮನೆ ಆಸ್ತಿ ನಂಬರ 4-1-3 ಇದು ನಿಂಗಪ್ಪ ಇವರ ಹೆಸರಿನಲ್ಲಿ ಮುಂಚೆ ಇತ್ತು ಸಾಕ್ಷಿಯು ಪುನಃ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಂಗಪ್ಪ ಇವರ ಮರಣದ ನಂತರ ಮನೆ ವಾದಿ ಮತ್ತು ಮಲ್ಲಪ್ಪ ಇವರ ಹೆಸರಿಗೆ ಮುಟೇಷನ ನಂಬರ 42/2002 - 2003 ರಲ್ಲಿ ದಿನಾಂಕಃ 08-08-2002 ರಲ್ಲಿ ವರ್ಗಾವಣೆ ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಮನೆ ಆಸ್ತಿ ನಂಬರ 4-1-1 ಇದು ಈಗ ವಾದಿ ಮತ್ತು ಮಲ್ಲಪ್ಪ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವರ ಆಸ್ತಿ ಅವರ ಹೆಸರಿನಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ವಾದಿ ಮತ್ತು ಮಲ್ಲಪ್ಪ ದಾವಾ ಆಸ್ತಿಗೆ ಮಾಲೀಕ ಮತ್ತು ಕಬ್ಜೆದಾರರು ಇರುತ್ತಾರೆ ಎಂದರೆ ಸಾಕ್ಷಿಯು ಅವರ ಆಸ್ತಿಗೆ ಅವರು ಮಾಲೀಕರು ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ವಾದಿಯು ತನ್ನ ಮತ್ತು ಮಲ್ಲಪ್ಪನ ಪರವಾಗಿ ಹೂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

4. ಸನಃ 2012 ರಲ್ಲಿ ನಾನು ಗೋವಿಂದಪ್ಪ ಇವರ ವಿರುದ್ದ ಸನಃ 2012 ರಲ್ಲಿ ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 103/2012 ಇದೆ ಎಂದರೆ ನನಗೆ ದಾವೆ ಹಾಕಿದ್ದರ ಬಗ್ಗೆ ಮಾಹಿತಿ ಇಲ್ಲ. ನಾವು ಮನೆ ಕಟ್ಟಬಾರದು ಎಂದು ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಮುಂಚೆಯೇ ಕಟ್ಟಿರುತ್ತೇನೆ ಎಂದು

ನುಡಿಯುತ್ತಾರೆ. ಸದರಿ ಸನಃ 2012 ರ ದಾವೆಯಲ್ಲಿ ನಿಂಗಪ್ಪ ಇವರ ಕಡೆಯಿಂದ ಖುಲ್ಲಾ ಜಾಗ ಖರೀದಿ ಮಾಡಿರುತ್ತೇವೆ ಎಂದು ಬರೆಸಿರುತ್ತೇವೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ನಿಂಗಪ್ಪ ಇವರ ಕಡೆಯಿಂದ ಖರೀದಿ ಮಾಡಿದ್ದರ ಬಗ್ಗೆ ಯಾವುದೇ ದಾಖಲಾತಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ವಾದಿಯು ಸಲ್ಲಿಸಿದ ಸನಃ 2012 ರ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಸಲು ದಾವಾ ನಂಬರ 103/2012 ಸೋತ ನಂತರ ಈ ದಾವೆಯನ್ನು ಸರ್ವೆ ನಂಬರ 94 ಬರುತ್ತದೆ ಎಂದು ಹೇಳಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಜಮೀನ ಸರ್ವೆ ನಂಬರ 90 ರಲ್ಲಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ಮುಂಚೆ ಅಸಲು ದಾವಾ ನಂಬರ 103/2012 ಇದು ಇದೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇತ್ತು ಎಂದರೆ ಸರಿಯಲ್ಲ. ಸದರಿ ಅಸಲು ದಾವಾ ನಂಬರ 103/2012 ರಲ್ಲಿ ಜಮೀನ ಸರ್ವೆ ನಂಬರ 90 ರಲ್ಲಿ ದಾವಾ ಆಸ್ತಿಯು ಬರುತ್ತದೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿ ಪರ ವಕೀಲರು ಎಮ್. ಎಮ್. ಕೆ ಇವರು ಇದ್ದರು ಎಂದರೆ ಸಾಕ್ಷಿಯು ಅದು ಅವರಿಗೆ ಗೊತ್ತು ಎಂದು ನುಡಿಯುತ್ತಾರೆ. ಅಸಲು ದಾವಾ ನಂಬರ 103/2012 ರ ದಾವೆಯಲ್ಲಿ ನನ್ನ ತಂದೆ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮೇಲ್ಮನವಿ ಡಿಕ್ರಿ ವಿರುದ್ದ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಈ ಪ್ರಸ್ತುತ ದಾವೆಯು ನನ್ನ ತಂದೆಯ ವಿರುದ್ದ ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ವಾರಸುದಾರರಾಗಿ ನಾವು ಸಹೋದರರು ಈ ದಾವೆಯಲ್ಲಿ ಸೇರ್ಪಡೆಯಾಗಿರುತ್ತೇವೆ ಎಂದರೆ ಸರಿ. ನನ್ನ ತಂದೆ ಕಾನೂನು ಬಾಹಿರವಾಗಿ ಅಸಲು ದಾವಾ ನಂಬರ 103/2017 ಬಾಕಿ ಇರುವಾಗ ಮನೆ ಮತ್ತು ಕೋಣೆ ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅದೇ ಜಾಗದಲ್ಲಿ ಮನೆ ಕಟ್ಟಿರುತ್ತೀರಾ? ಎಂದರೆ ಸಾಕ್ಷಿಯು ಮುಂಚೆ ಪತ್ರಾ ಶೆಡ್ಡನ್ನು ತೆಗೆದು

ಮನೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಆ ದಾವೆ ನಡೆಯುವಾಗ ಕಾನೂನು ಬಾಹಿರವಾಗಿ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮನೆಯ ಕಬ್ಜೆಯ ಸಲುವಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಸ್ಲಮ್ ಬೋರ್ಡದವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

5. ಸದರಿ ವಾದಿಯ ಜಾಗದಲ್ಲಿ ಮನೆ ಕಟ್ಟಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ವಾದಿಯ ಜಾಗ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಯಾವುದೇ ದಾಖಲಾತಿ ಇಲ್ಲದೆ ಸ್ಲಮ್ ಬೋರ್ಡದವರು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**